**ದಿನಾಂಕಃ 10/12/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ- ಶ್ರೀ ಆರ್.ಡಿ.ಆರ್. ವಕೀಲರಿಂದ 1ನೇ ಪ್ರತಿವಾದಿಯ ಪರವಾಗಿ .**

ನಾವು 3 ಜನ ಗಂಡು ಮಕ್ಕಳು ಹಾಗು 3 ಜನ ಹೆಣ್ಣು ಮಕ್ಕಳು. 3 ಜನ ಗಂಡು ಮಕ್ಕಳು ಎಂದರೆ ನಾನು, ವಾದಿ ಹಾಗೂ 1ನೇ ಪ್ರತಿವಾದಿ ಎಂದರೆ ಸರಿ . ಹೆಣ್ಣು ಮಕ್ಕಳ ಹೆಸರು ಗೌರಮ್ಮ, ಸಣ್ಣಮ್ಮ ಹಾಗೂ ಪುಟ್ಟಮ್ಮ ಎಂದರೆ ಸರಿ . ನನ್ನ ತಂದೆಗೆ ಜಮೀನು ಪಿತ್ರಾರ್ಜಿತವಾಗಿ ಬಂದಿರುತ್ತದೆ. ನನ್ನ ತಂದೆಗೆ ಜಮೀನು ಆಲಗೌಡನಹಳ್ಳಿಯಲ್ಲಿ ಮಾತ್ತ ಇತ್ತು. ನನ್ನ ತಂದೆಗೆ ಆಲಗೌಡನಹಳ್ಳಿ ಗ್ರಾಮದ ಸರ್ವೇ ನಂ.4 ರಲ್ಲಿ 8 ಗುಂಟೆ, ಸರ್ವೇ ನಂ. 15 ರಲ್ಲಿ 2 ಎಕರೆ 23 ಗುಂಟೆ, ಸರ್ವೇ ನಂ. 18/1 ರಲ್ಲಿ 16 ಗುಂಟೆ, ಸರ್ವೇ ನಂ. 21 ರಲ್ಲಿ 3 ಎಕರೆ, ಸರ್ವೇ ನಂ. 28 ರಲ್ಲಿ 1 ಎಕರೆ 30 ಗುಂಟೆ, ಸರ್ವೇ ನಂ. 95 ರಲ್ಲಿ 4 ಎಕರೆ ಹಾಗೂ 2 ನಾಡ ಹಂಚಿನ ಮನೆಗಳು ಪಿತ್ರಾರ್ಜಿತವಾಗಿ ಬಂದಿರುವ ಸ್ವತ್ತುಗಳು ಎಂದರೆ ಸರಿ . ನನ್ನ ತಂದೆ ಮರಣ ಹೊಂದಿಸುಮಾರು 20 ವರ್ಷಗಳು ಆಯಿತು. ನನ್ನ ತಾಯಿ ಮರಣ ಹೊಂದಿ ಸುಮಾರು 18 ವರ್ಷಗಳಾಯಿತು. ದಿ.05.04.1979 ರಂದು ನನ್ನ ತಂದೆ ತಾಯಿ ಇಬ್ಬರೂ ಜೀವಂತವಾಗಿ ಇದ್ದರು. ಅವರು ಜೀವಂತವಾಗಿ ಇದ್ದ ಸಮಯದಲ್ಲಿ ನಮ್ಮ ಕುಟುಂಬದಲ್ಲಿ ಒಂದು ಪಾಲುಪಟ್ಟಿ ಆಗಿರುತ್ತದೆ ಎಂದರೆ ಸರಿ . ಸದರಿ ಪಾಲುಪಟ್ಟಿಯ ಪ್ರಕಾರ ಸರ್ವೇ ನಂ. 4 ರಲ್ಲಿ 1 ಗುಂಟೆ, ಸರ್ವೇ ನಂ.15 ರಲ್ಲಿ 1 ಎಕರೆ 2.1/2 ಗುಂಟೆ, ಸರ್ವೇ ನಂ.18/1 ರಲ್ಲಿ 5 ಗುಂಟೆ, ಸರ್ವೇ ನಂ. 21 ರಲ್ಲಿ 33 ಗುಂಟೆ, ಸರ್ವೇ ನಂ.28 ರಲ್ಲಿ 15 ಗುಂಟೆ, ಸರ್ವೇ ನಂ. 95 ರಲ್ಲಿ 1 ಎಕರೆ ಹಾಗೂ ಇನ್ನೊಂದು ಹಳೆ ಮನೆ ನಿಮ್ಮ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ನನ್ನ ಹಿಸ್ಸೆಗೆ ಯಾವುದೇ ಮನೆ ಬಂದಿಲ್ಲ, ನಿವೇಶನ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ಅದೇ ರೀತಿ ಸದರಿ ಪಾಲುಪಟ್ಟಿಯ ಪ್ರಕಾರ ವಾದಿಯ ಹಿಸ್ಸೆಗೆ ಸರ್ವೇ ನಂ. 4 ರಲ್ಲಿ 1 ಗುಂಟೆ, ಸರ್ವೇ ನಂ.15 ರಲ್ಲಿ 1 ಎಕರೆ 1/2 ಗುಂಟೆ, ಸರ್ವೇ ನಂ.18/1 ರಲ್ಲಿ 6 ಗುಂಟೆ, ಸರ್ವೇ ನಂ. 21 ರಲ್ಲಿ 39 ಗುಂಟೆ, ಸರ್ವೇ ನಂ.28 ರಲ್ಲಿ 15 ಗುಂಟೆ, ಸರ್ವೇ ನಂ. 95 ರಲ್ಲಿ 1 ಎಕರೆ ಹಾಗೂ ಹಳೆ ಮನೆಯಲ್ಲಿ ಅರ್ಧ ಭಾಗದ ಹಿಸ್ಸೆ ಬಂದಿತ್ತು ಎಂದರೆ ಸರಿ .

ಅದೇ ರೀತಿ ಸದರಿ ಪಾಲುಪಟ್ಟಿಯ ಪ್ರಕಾರ 1ನೇ ಪ್ರತಿವಾದಿಗೆ ಸರ್ವೇ ನಂ. 4 ರಲ್ಲಿ 1 ಗುಂಟೆ, ಸರ್ವೇ ನಂ.15 ರಲ್ಲಿ 20 ಗುಂಟೆ, ಸರ್ವೇ ನಂ.18/1 ರಲ್ಲಿ 5 ಗುಂಟೆ, ಸರ್ವೇ ನಂ. 21 ರಲ್ಲಿ 1 ಎಕರೆ 8

ಗುಂಟೆ, ಸರ್ವೇ ನಂ.28 ರಲ್ಲಿ 1ಎಕರೆ, ಸರ್ವೇ ನಂ. 95 ರಲ್ಲಿ 1 ಎಕರೆ ಹಾಗೂ ಹಳೆ ಮನೆಯಲ್ಲಿ ಅರ್ಧ ಭಾಗದ ಹಿಸ್ಸೆ ಬಂದಿತ್ತು ಎಂದರೆ ಸರಿ .

ದಾವಾನುಸೂಚಿ ಐಟಂ ನಂ. 9 ಮತ್ತು 10 ರ ವಿಭಾಗ 1979ರ ವಿಭಾಗ ಪತ್ರದಲ್ಲಿಯೇ ಆಗಿರುತ್ತದೆ. ನನಗೆ ಓದಲು ಬರುವುದಿಲ್ಲ. ನಾನು ನ್ಯಾಯಾಲಯಕ್ಕೆ ಲಿಖಿತ ಹೇಳಿಕೆಯಲ್ಲಿರುವ ಅಂಶಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ನನ್ನ ಲಿಖಿತ ಹೇಳಿಕೆಯ 8ನೇ ಪ್ಯಾರದಲ್ಲಿ ದಾವಾನುಸೂಚಿ ಐಟಂ ನಂ. 9 ಮತ್ತು 10ರ ಸ್ವತ್ತು 1990 ರಲ್ಲಿ ವಿಭಾಗ ಆಗಿರುತ್ತದೆ ಎಂದು ನಾನು ಬರೆಯಿಸಿಲ್ಲ. 1979ರ ವಿಭಾಗ ಸಮಯದಲ್ಲಿ ನಿಮ್ಮ ತಂದೆಯ ತಾಯಿಯ ಜೀವನಾಂಶಕ್ಕೆಂದು ಸರ್ವೇ ನಂ. 21 ಹಾಗೂ 95 ರಲ್ಲಿ ತಲಾ ಒಂದೊಂದು ಎಕರೆಯಂತೆ ಜಮೀನನ್ನು ಬಿಡಲಾಗಿತ್ತು ಎಂದರೆ ಸಾಕ್ಷಿಯು ಸರ್ವೇ ನಂ. 21 ರಲ್ಲಿ ಮಾತ್ರ ಜೀವನಾಂಶಕ್ಕಾಗಿ ಬಿಡಲಾಗಿತ್ತು ಎಂದು ನುಡಿಯುತ್ತಾರೆ.

ಸದರಿ ಸರ್ವೇ ನಂ. 21 ರಲ್ಲಿ ನಮ್ಮ ತಂದೆ ತಾಯಿ ಜೀವನಾಂಶಕ್ಕೆಂದು ಬಿಟ್ಟಿದ್ದ ಆಸ್ತಿಯನ್ನು ನಾನು, ವಾದಿ ಹಾಗೂ 1ನೇ ಪ್ರತಿವಾದಿ ಸಮವಾಗಿ ಹಂಚಿಕೊಂಡಿದ್ದೇವೆ ಎಂದರೆ ಸರಿ . ಸರ್ವೇ ನಂ. 95 ರಲ್ಲಿ 1 ಎಕರೆ ಆಸ್ತಿಯನ್ನು ನಿಮ್ಮ ಹಿಸ್ಸೆಯ ದಕ್ಷಿಣ ದಿಕ್ಕಿಗೆ ಜೀವನಾಂಶಕ್ಕೆಂದು ಬಿಡಲಾಗಿತ್ತು ಎಂದರೆ ಸಾಕ್ಷಿಯು ಸದರಿ ಸರ್ವೇ ನಂಬರ್ ನಲ್ಲಿ ಜೀವನಾಂಶಕ್ಕಾಗಿ ಯಾವುದೇ ಆಸ್ತಿ ಬಿಟ್ಟಿಲ್ಲ ಎಂದು ನುಡಿಯುತ್ತಾರೆ. ಯಾವುದಾದರು ಪತ್ರವನ್ನು ಬರೆಯುವಾಗ ಅದರಲ್ಲಿ ತಿದ್ದುಪಡಿಯಾದರೆ ಬಿಕ್ಲಂದಾರರು ಅಲ್ಲಿ ಸಹಿ ಮಾಡುತ್ತಾರೆ ಅಥವಾ ಸದರಿ ತಿದ್ದುಪಡಿಯ ಬಗ್ಗೆ ಪತ್ರದಲ್ಲಿ ಷರಾ ಬರೆಯುತ್ತಾರೆ ಎಂದರೆ ಸರಿ . 1979ರ ಪತ್ರದಲ್ಲಿ ಯಾವುದೇ ತಿದ್ದುಪಡಿಯಾಗಿರಲಿಲ್ಲ ಎಂದರೆ ಸರಿ . ಆದ್ದರಿಂದ 1979 ರ ಪತ್ರದಲ್ಲಿ ತಿದ್ದುಪಡಿಯಾಗಿದೇ ಎಂದು ಬಿಕ್ಲಂದಾರರ ಸಹಿಯಾಗಲೀ ಅಥವಾ ಯಾವುದೇ ಷರಾ ಇಲ್ಲ ಎಂದರೆ ಸರಿ .

1979ರ ಮೂಲ ಪಾಲುಪಟ್ಟಿ ನನ್ನ ಬಳಿ ಇರುವುದಿಲ್ಲ, ಅದು ವಾದಿಯ ಪತ್ನಿಯ ತಂದೆಯ ಬಳಿ ಇರುತ್ತದೆ ಎಂದು ನುಡಿಯುತ್ತಾರೆ. ನನಗೆ ಈಗ 70 ವರ್ಷ ವಯಸ್ಸು. ನನಗೆ 3 ಜನ ಮಕ್ಕಳು. ಅವರ ಪೈಕಿ ಇಬ್ಬರು ಗಂಡು ಮಕ್ಕಳು ಹಾಗೂ ಒಬ್ಬ ಹೆಣ್ಣು ಮಗಳು. ನನ್ನ ಹಾಗೂ ಗಂಡು ಮಕ್ಕಳ ನಡುವೆ ದಿ.02.11.2009 ರಂದು ಒಂದು ವಿಭಾಗ ಪತ್ರ ಆಗಿರುತ್ತದೆ ಎಂದರೆ ಸರಿ . ಸದರಿ ವಿಭಾಗ ಪತ್ರದಲ್ಲಿ ಸರ್ವೇ ನಂಬರ್ 95ರ ಸ್ವತ್ತನ್ನು ಮಾತ್ರ ವಿಭಾಗ ಮಾಡಿಕೊಳ್ಳಲಾಗಿದೆ. 2009ರ ವಿಭಾಗ ಪತ್ರದಲ್ಲಿ ನನ್ನ ಬೇರೆ ಯಾವುದೇ ಪಿತ್ರಾರ್ಜಿತ ಆಸ್ತಿಯನ್ನು ಆಗಲೀ ಅಥವಾ ಸ್ವಯಾರ್ಜಿತ ಆಸ್ತಿಯನ್ನು ಸೇರಿಸಿಲ್ಲ. 1979ರ

ಮೂಲ ಪಾಲುಪಟ್ಟಿ ನನ್ನ ಬಳಿ ಇದ್ದು ಅದರಲ್ಲಿ ಸರ್ವೇನಂ. 95ರಲ್ಲಿ 1 ಎಕರೆ ನನ್ನ ಹಿಸ್ಸೆಗೆ ಎಂದು ಇದ್ದು ನಾನು ಅದನ್ನು ತಿದ್ದುಪಡಿಮಾಡಿ 2 ಎಕರೆ ಎಂದು ಮಾಡಿ, ದಾಖಲೆಗಳನ್ನು ಸೃಷ್ಟಿಸಿ ಕಂದಾಯ ಅಧಿಕಾರಿಗಳನ್ನು ಷರೀಕ್ ಮಾಡಿಕೊಂಡು ನನ್ನ ಹೆಸರಿಗೆ ಖಾತೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸರ್ವೇ ನಂ.95ರ ಜಮೀನಿನಲ್ಲಿ ವಾದಿ ಹಾಗೂ 1ನೇ ಪ್ರತಿವಾದಿಗೂ ಹಿಸ್ಸೆ ಕೊಡಬೇಕಾಗುತ್ತದೆ ಎಂದು ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ಮಾತ್ರ ವಿಭಾಗ ಪತ್ರ  ಮಾಡಿಕೊಂಡು ನನ್ನ ಮಕ್ಕಳಿಗೆ ವಿಭಾಗ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಸದರಿ ಸ್ವತ್ತು ಬಾರೆಯಾಗಿದ್ದು ಅದರಲ್ಲಿ ಕಲ್ಲುಗುಡ್ಡ ಇದ್ದು ಅದನ್ನು ನನ್ನ ಮಕ್ಕಳು ಸಮದಟ್ಟು ಮಾಡಿರುವುದರಿಂದ ಅವರಿಗೆ ವಿಭಾಗ ಮಾಡಿಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

ಸದರಿ 2009ರ  ವಿಭಾಗ ಪತ್ರದಲ್ಲಿ ಸರ್ವೇ ನಂ.95ರ ಸ್ವತ್ತು ಬಾರೆಯಾಗಿದ್ದು ಅದು ಕಲ್ಲುಗಳಿಂದ ಕೂಡಿತ್ತು ಎಂದು ಬರೆಯಿಸಿಲ್ಲ. ದಿ.19.10.2019 ರಂದು ಈ ದಾವೆಯಲ್ಲಿ ತೀರ್ಪು ಆಗಿದ್ದು ಸದರಿ ತೀರ್ಪಿನ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸುವ ಮಧ್ಯದಲ್ಲಿ 2009ರ ವಿಭಾಗ ಪತ್ರ  ನಾವು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಹಾಗೂ ನನ್ನ ಮಕ್ಕಳು ಮಾಡಿಕೊಂಡಿರುವ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ . ಸದರಿ ವಿಭಾಗ ಪತ್ರದ ಪ್ರತಿಯನ್ನು ನೋಡಿದರೆ ನಿಮಗೆ ಗೊತ್ತಾಗುತ್ತದೆಯೇ ಎಂದರೆ ಸಾಕ್ಷಿಯು ಇಲ್ಲ ನಾನು ಓದಿಲ್ಲ ಎಂದು ನುಡಿಯುತ್ತಾರೆ.

ದಿ.19.10.2019ರಂದು ಈ ದಾವೆಯಲ್ಲಿ ಆದ ತೀರ್ಪಿನ ವಿರುದ್ಧ ದಿ.18.11.2019ರಂದು ನಾನು ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ .  ಸರ್ವೇ ನಂ. 95ರಲ್ಲಿ ನಮ್ಮ ತಂದೆ ತಾಯಿಯ ಜೀವನಾಂಶಕ್ಕೆಂದು ಬಿಟ್ಟಿದ್ದ 1 ಎಕರೆ ಸ್ವತ್ತಿನಲ್ಲಿ 1ನೇ ಪ್ರತಿವಾದಿಗೂ ಸಮವಾದ ಹಿಸ್ಸೆ ಬರಬೇಕಾಗಿದ್ದು ಅವರಿಗೆ ಹಿಸ್ಸೆ ಕೊಡಬಾರದು ಎಂದು ನಾನು ಹಾಗೂ ವಾದಿ ಸೇರಿ ಈ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸ.ಇ.

ಜೆ.ಎಂ.ಎಫ್.ಸಿ., ಹೊಳೆನರಸೀಪುರ.